ISSN (ELECTRONIC): 2945-3135

ಡಾ.ಪಿ. ನಂಜುಂಡ (2026). **ಸುಸ್ಥಿರ ಗ್ರಾಮೀಣ ಸಬಲೀಕರಣಕ್ಕಾಗಿ ಡಿಜಿಟಲ್ ಮಾರ್ಗಗಳು: ಕೆ. ಪಿ ಪೂರ್ಣಚಂದ್ರ ತೇಜಸ್ವಿ ಅವರ ಚಿಂತನಧಾರೆಗಳು.** , International Journal of Multidisciplinary Research & Reviews 5(si2), 378-381.

INTERNATIONAL JOURNAL OF MULTIDISCIPLINARY RESEARCH & REVIEWS

journal homepage: www.ijmrr.online/index.php/home

# ಸುಸ್ಥಿರ ಗ್ರಾಮೀಣ ಸಬಲೀಕರಣಕ್ಕಾಗಿ ಡಿಜಿಟಲ್ ಮಾರ್ಗಗಳು: ಕೆ. ಪಿ ಪೂರ್ಣಚಂದ್ರ ತೇಜಸ್ವಿ ಅವರ ಚಿಂತನಧಾರೆಗಳು

ಡಾ.ಪಿ. ನಂಜುಂಡ

ಕನ್ನಡ ಸಹ -ಪ್ರಾಧ್ಯಾಪಕರು

ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ,

ಸರ್ಕಾರಿ ಕಲಾ ಕಾಲೇಜು ಬೆಂಗಳೂರು-560001

*Corresponding Author: 1981nanjup@gmail.com

**How to Cite the Article:** ಡಾ.ಪಿ. ನಂಜುಂಡ (2026). **ಸುಸ್ಥಿರ ಗ್ರಾಮೀಣ ಸಬಲೀಕರಣಕ್ಕಾಗಿ ಡಿಜಿಟಲ್ ಮಾರ್ಗಗಳು: ಕೆ. ಪಿ ಪೂರ್ಣಚಂದ್ರ ತೇಜಸ್ವಿ ಅವರ ಚಿಂತನಧಾರೆಗಳು.** , International Journal of Multidisciplinary Research & Reviews, 5(si2). 378-381.

https://doi.org/10.56815/ijmrr.v5si2.2026.378-381

## ಪೀಠಿಕೆ

ಭಾರತ ಮೂಲತಃ ಕೃಷಿ ಪ್ರಧಾನ ದೇಶ. ಕೃಷಿಗೆ ಸಂಬಂಧಿಸಿದಂತೆ ಇಂದು ಹೆಚ್ಚು ಜನ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅವಲಂಬಿತರಾಗಿದ್ದಾರೆ. ಇಂದು ಜಗತ್ತು ಜಾಗತೀಕರಣದ ಭರಾಟೆಗೆ ಸಿಲುಕಿ, ವಿಶ್ವವು ಇಡೀ ಹಳ್ಳಿಯಾಗಿ ಮಾರ್ಪಾಡಾಗುವ ಪರಿಸ್ಥಿತಿಗೆ ಬಂದಿದೆ. ಅಂಗೈನಲ್ಲಿಯೇ ತಮ್ಮ ವ್ಯವಹಾರಿಕ ಬದುಕನ್ನು ಕಟ್ಟಿಕೊಳ್ಳುವ ಸಚಿದರ್ಭ ಎದುರಾಗಿದೆ. ಹಳ್ಳಿ ಮತ್ತು ನಗರವೆಂಬ ಕಂದರಗಳು ಅಳಿದು ಹೋಗುವ ಪರಿಸ್ಥಿತಿ ನಿಮಾಣವಾಗಿದೆ.

ಇಡೀ ರಾಜ್ಯಕ್ಕೆ ಹೆಚ್ಚಿನ ವರಮಾನವನ್ನು ಮುಖ್ಯನಗರಗಳು ತಂದರು, ಗ್ರಾಮೀಣ ಭಾರತದ ಕೊಡುಗೆಗಳು ಕಡಿಮೆಯಾಗಿಲ್ಲ. ಈ ದಿಸೆಯಲ್ಲಿಯೇ ಸ್ಥಿರವಾದ ಗ್ರಾಮೀಣ ಸಬಲೀಕರಣಕ್ಕಾಗಿ ಡಿಜಿಟಲ್ ಮಾರ್ಗಗಳು ಅವಶ್ಯಕತೆ ಹೆಚ್ಚಿದೆ. ಮಹಾತ್ಮಗಾಂಧೀಜಿ ಅವರ ಪರಿಕಲ್ಪನೆಯಂತೆ ಹಳ್ಳಿಗಳು ಬೆಳೆದರೆ ದೇಶ ಪ್ರಗತಿಯನ್ನು ಸಾಧಿಸುತ್ತದೆ ಎನ್ನುವ ಮಾತುಗಳು ಅಕ್ಷರಶಃ ಸತ್ಯದಿಂದ ಕೂಡಿರುವ ಹೇಳಿಕೆಯಾಗಿದೆ. ಗ್ರಾಮಗಳು ಉದ್ಧಾರವಾದರೆ ಮಾತ್ರ ದೇಶದ ಸರ್ವತೋಮುಖ ಬೆಳವಣಿಗೆ ಸಾಧ್ಯ ಈ ಹಂತದಲ್ಲಿ ಡಿಜಿಟಲ್ ಮಾರ್ಗಗಳು ಸುಸ್ಥಿರ ಗ್ರಾಮೀಣ ಸಬಲೀಕರಣಕ್ಕೆ ಹೆಚ್ಚಿನ ಒತ್ತನ್ನು ನಿಸ್‌ಸಂಶಯವಾಗಿ ಕೊಡುತ್ತದೆ.

1) ಜಾಗತಿಕ ಮಾರುಕಟ್ಟೆ:- ಇಂದು ರೈತರು ಜಾಗತಿಕ ಮಾರುಕಟ್ಟೆಯಲ್ಲಿ ಯಾವ ಬೆಳೆಗಳನ್ನು ಬೆಳೆದರೆ ತಮಗೆ ಲಾಭವಿದೆ ಎನ್ನುವ ಮಾಹಿತಿ ದೊರೆಯುವಂತಾಗಿದೆ. ಮೊದಲೆಲ್ಲಾ ರೈತರು ಖುತುಮಾನವನ್ನು ಆಧರಿಸಿ ಬೆಳೆಗಳನ್ನು ಬೆಳೆಯುವ ಪದ್ಧತಿ ಇತ್ತು. ಆಗ ಎಲ್ಲ ರೈತರು ಒಂದೇ ರೀತಿಯ ಬೆಳೆಗಳನ್ನು ಬೆಳೆದು ತಮ್ಮಲ್ಲಿಯೇ ಪೈಪೋಟಿ ಹೆಚ್ಚಿ, ಆ ಬೆಳೆಗೆ ಹೆಚ್ಚಿನ ಲಾಭವು ದೊರೆಕುತ್ತಿರಲ್ಲಿಲ್ಲ. ಈಗ ಪರಿಸ್ಥಿತಿ ಭಿನ್ನವಾಗಿರುವುದರಿಂದ ಜಾಗತಿಕ ಮಾರುಕಟ್ಟೆಗೆ ಅನುಗುಣವಾಗಿ ರೈತರು ಬೆಳೆಗಳನ್ನು ಬೆಳೆದು ಲಾಭವನ್ನು ಗಳಿಸುತ್ತಿದ್ದಾರೆ.

The work is licensed under a Creative Commons Attribution Non Commercial 4.0 International License

2) ಅಂತರ್‌ಜಲ ಶೋಧನೆ:- ನಾಗರೀಕತೆಯ ಉಗಮ, ವಿಕಾಸಕ್ಕೆ ನೀರಿನ ಮಹತ್ವ ಹೆಚ್ಚಿದೆ. ಈ ವೇಳೆಯಲ್ಲಿ ಡಿಜಿಟಲ್ ಮಾರ್ಗಗಳಿಂದ ಯಾವ ಭಾಗದಲ್ಲಿ ನೀರಿನ ಪ್ರಮಾಣ ಹೆಚ್ಚಿದೆ, ಕಡಿಮೆಯಿದೆ ಎಂದು ತಿಳಿದು ತಮ್ಮ ಬೆಳೆಗಳನ್ನು ರೈತರು ಬೆಳೆಯಬಹುದಾಗಿದೆ.

3) ಹವಾಮಾನ ವೈಪರೀತ್ಯ:- ಇಂದು ಗ್ರಾಮೀಣ ಪರಿಸರದಲ್ಲಿ ಮುಂದೆ ಬರುವ ಬೀಕರ ಮಳೆ, ಬಿರುಗಾಳಿ ಮತ್ತು ಪ್ರವಾಹಗಳು ಮೊದಲೇ ಡಿಜಿಟಲ್ ಮಾರ್ಗಗಳಿಂದ ಅರಿವಿಗೆ ಬರುವುದರಿಂದ, ಗ್ರಾಮೀಣರು ತಮ್ಮ ಬೆಳೆದ ಬೆಳೆಗಳನ್ನು ಕಟಾವುಗಳನ್ನು ಸಂರಕ್ಷಣೆಯನ್ನು ಮಾಡಬಹುದಾಗಿದೆ.

4) ಆರೋಗ್ಯ ಸುಧಾರಣೆ:- ಇಂದು ನಗರ ಭಾರತ ಹಾಗೂ ಗ್ರಾಮೀಣ ಭಾರತದಲ್ಲಿ ಜನರ ಆರೋಗ್ಯ ಹೆಚ್ಚು ಸುಧಾರಣೆಯಾಗುತ್ತಿದೆ ಕಾರಣ ಡಿಜಿಟಲ್‌ಮಾರ್ಗದಿಂದ. ಒಂದು ದೇಶದ ಪರಿಪೂರ್ಣ ಅಭಿವೃದ್ಧಿಗೆ, ವ್ಯಕ್ತಿ ಮತ್ತು ಸಮುದಾಯಗಳು ಶ್ರಮಿಸುತ್ತಿರುವ ಸಂದರ್ಭದಲ್ಲಿ ಮುಖ್ಯವಾಗಿ ಎರಡು ಅಂಶಗಳು ಪ್ರಧಾನವಾಗಿ ಬೇಕಾಗುತ್ತದೆ. ಮೊದಲನೆಯದು ಆರೋಗ್ಯ, ಎರಡನೇಯದು ಶಿಕ್ಷಣ. ವಿಶೇಷವಾಗಿ ಟಿಜಿಟಲ್ ಮಾರ್ಗಗಳಿಂದ ರೈತರ ಆರೋಗ್ಯದ ಸಮಸ್ಯೆಗಳು ಮನದಟ್ಟಾಗುತ್ತದೆ, ಅವರ ಆರೋಗ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಒತ್ತನ್ನು ನೀಡಲಾಗುತ್ತದೆ. ಅದೇ ರೀತಿ ರೈತನ ಬದುಕಿನ ಇನ್ನೊಂದು ಮುಖ್ಯ ಉಪಕಸುಬು ಆದ ಹೈನುಗಾರಿಕೆ, ಪ್ರಾಣಿಸಾಕಣೆಗೆ ಸಂಬಂಧಿಸಿದಂತೆ ಅದರ ಆರೋಗ್ಯಕ್ಕೂ ಹೆಚ್ಚಿನ ಗಮನವನ್ನು ಡಿಜಿಟಲ್ ಮಾರ್ಗದಿಂದ ಪಡೆಯಬಹುದಾಗಿದೆ.

5) ಆಧುನಿಕ ತಂತ್ರಜ್ಞಾನ:- ಆಧುನಿಕ ತಂತ್ರಜ್ಞಾನದ ಫಲವಾಗಿ ಹಿಂದಿಗಿಂತ ಇಂದು ರೈತರು ದೈಹಿಕವಾದ ಶ್ರಮವನ್ನು ಕಡಿಮೆ ಹಾಕಿ, ತಮ್ಮ ಆಧುನಿಕ ತಂತ್ರಜ್ಞಾನದ ಮೂಲಕ ಕಡಿಮೆ ಭೂಮಿಯಲ್ಲಿ ಹೆಚ್ಚಿನ ಮಿಶ್ರಬೆಳೆಗಳನ್ನು ಬೆಳೆಯುವ ಮೂಲಕವಾಗಿ ತನ್ನ ಮತ್ತು ತಮ್ಮ ಕುಟುಂಬದ ಆರ್ಥಿಕವಾಗಿ ಪ್ರಗತಿಯನ್ನು ಕಾಣುವಂತಾಗಿದೆ. ಆಧುನಿಕ ತಂತ್ರಜ್ಞಾನ ಡಿಜಿಟಲ್ ಮಾರ್ಗದ ಮತ್ತೊಂದು ರೂಪವೇ ಆಗಿದ್ದು ಸುಸ್ಥಿರ ಗ್ರಾಮೀಣ ಸಬಲಿಕರಣಕ್ಕೆ ಹೆಚ್ಚಿನ ಕಾಣಿಕೆಯನ್ನು ನೀಡಿದೆ.

6) ಸಮಯದ ಉಳಿತಾಯ:- ಡಿಜಿಟಲ್ ಮಾರ್ಗದಿಂದ ಗ್ರಾಮೀಣ ಭಾರತದಲ್ಲಿ ಸಮಯಕ್ಕೆ ಹೆಚ್ಚಿನ ಮನ್ನಣೆ ದೊರಕಿದೆ. ಕೆಲವೇ ಸೆಕೆಂಡ್‌ಗಳು, ನಿಮಿಷಗಳಲ್ಲಿ ಹಣವರ್ಗಾವಣೆಯ ಕೆಲಸ ಆಗುತ್ತಿದೆ. ತಮಗೆ ಬರಬೇಕಾದ ಕೇಂದ್ರ, ರಾಜ್ಯ ಸರ್ಕಾರದ ಉದ್ದೇಶಿತ ಹಣಗಳು ನೇರವಾಗಿ ತಮ್ಮ ಖಾತೆಗಳಿಗೆ ಬರುವುದರಿಂದ ಅಲೆದಾಟಗಳು, ಭ್ರಷ್ಟಾಚಾರಗಳಿಗೆ ಕಡಿವಾಣ ಬಿದ್ದಿದೆ. ಸಮಯವೇ ಹಣವೆಂದು ಹೇಳುವ ಈ ಹೊತ್ತಿನಲ್ಲಿ ಗ್ರಾಮೀಣ ಭಾರತದ ಸುಸ್ಥಿರ ಸಬಲೀಕರಣಕ್ಕೆ ಫೋನ್ ಪೇ, ಗೂಗಲ್ ಪೇ, ನೆಟ್ ಬ್ಯಾಕಿಂಗ್ ಮತ್ತು ಎ.ಟಿ.ಎಂಗಳು ಸಮಯ ಪೋಲಾಗುವುದನ್ನು ತಪ್ಪಿಸುವ ಡಿಜಿಟಲ್ ಸಾಧನಗಳು.

7) ಕೃತಕ ಮಳೆ :- ಗ್ರಾಮೀಣ ಬಾರತದ ಕೆಲವು ಪ್ರದೇಶಗಳಲ್ಲಿ ನೀರಿನ ಅಭಾವವು ಹೆಚ್ಚಾಗಿದೆ. ಹವಾಮಾನ ವೈಪರೀತ್ಯಗಳು ಸಹ ನೀರಿನ ಬರಕ್ಕೆ ಕಾರಣವಾಗಿದೆ. ಈ ಸಂದರ್ಭದಲ್ಲಿ ವೈಜ್ಞಾನಿಕ ದೃಷ್ಠಿಕೋನದಿಂದ ಮೋಡಬಿತ್ತನೆ ಕಾರ್ಯದಿಂದ ಕೃತಕ ಮಳೆಯನ್ನು ಅವಲಂಬಿಸಿರುವುದು ಇತ್ತೀಚೆಗೆ ಹೆಚ್ಚಾಗುತ್ತಿದೆ. ಇದು ಪರಿಸರಕ್ಕೆ ಯಾವುದೇ ರೀತಿಯ ಹಾನಿಯನ್ನು ಉಂಟುಮಾಡದೆ ಪ್ರದೇಶಗಳಿಗೆ ಸೀಮಿತ ಮಾಡಿಕೊಂಡು ಗ್ರಾಮೀಣ ಭಾರತದ ನೀರಿನ ಬವಣೆಯನ್ನು ನೀಗಿಸುವ ಮತ್ತೊಂದು ಡಿಜಿಟಲ್ ಮಾರ್ಗವಾಗಿದೆ.

8) ಶಿಕ್ಷಣ :- ಇಂದು ಸಮೂಹ ಮಾಧ್ಯಮಗಳು ಗ್ರಾಮೀಣ ಭಾರತಕ್ಕೆ ಶಿಕ್ಷಣವನ್ನು ನೀಡುತ್ತಿದೆ. ಅದರಲ್ಲಿಯೂ ಗ್ರಾಮೀಣ ಭಾರತದವರಿಗೆ ಹೆಚ್ಚು ರೈತ ಸ್ನೇಹಿಯಾಗಿರುವುದು ರೇಡಿಯೋ ಮೂಲಕ ಕೃಷಿಗೆ ಸಂಬಂಧಿಸಿದಂತೆ, ಹಲವಾರು ತಜ್ಞರುಗಳ ಉಪನ್ಯಾಸಗಳು ಸಂದರ್ಶನವನ್ನು ಮಾಡುವುದರಿಂದ, ಅವರಲ್ಲಿ ಜಾಗೃತಿ ಉಂಟಾಗುತ್ತಿದೆ. ಸರ್ಕಾರದ ಸಂಸ್ಥೆಯ ಅಡಿಯಲ್ಲಿ ಬರುವ ದೂರದರ್ಶನ, ಚಂದನದಂತಹ ಚಾನೆಲ್‌ಗಳು ಗ್ರಾಮೀಣ ಭಾರತಕ್ಕೆ ಬೇಕಾದ ಉದ್ಯೋಗದ ಅರಿವು, ಮಾರುಕಟ್ಟೆಗಳ ಏರಿಳಿತಗಳ ಅರಿವು ಮತ್ತು ಆಧುನಿಕ ತಂತ್ರಜ್ಞಾನ ಬಳಕೆಯ ಅರಿವನ್ನು ಸದಾ ನೀಡುತ್ತಿರುವುದನ್ನು ಗಮನಿಸಬಹುದಾಗಿದೆ.

ಪಂಚಾಯ್ತಿಯಲ್ಲಿ ಡಿಜಿಟಲ್ ಲೈಬ್ರರಿಗಳ ಮೂಲಕ ಗ್ರಾಮೀಣ ಪರಿಸರದ ರೈತಾಪಿ ಮಕ್ಕಳು ವಿಶೇಷವಾಗಿ ಶಿಕ್ಷಣದ ಬಗ್ಗೆ ಹೆಚ್ಚಿನ ಕಾಳಜಿಯನ್ನು ತೋರುವಂತಾಗಿದೆ. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮೀಣ ಭಾರತಕ್ಕೆ ಕೇಂದ್ರ ಮತ್ತು ರಾಜ್ಯ ಹಾಗೂ ಸ್ಥಳೀಯ ಸಂಸ್ಥೆಗಳು ನೀಡುವ ಯೋಜನೆಗಳು, ಅನುದಾನಗಳ ಬಗ್ಗೆ ಮಾಧ್ಯಮಗಳು ಮಾಹಿತಿಯನ್ನು ನೀಡುತ್ತಿವೆ. ರೈತರು ತಮ್ಮ ಭೂಮಿಗೆ ಸಂಬಂಧಿಸಿದಂತೆ, ಆಧುನಿಕವಾದ ಪೋರ್ಟಲ್‌ಗಳ ಮೂಲಕ ಮಾಹಿತಿ ನೀಡುತ್ತಿದೆ.
ಉದಾಹರಣೆ :- ಪಂಚತಂತ್ರ 2.0, ಪಂಚಮಿತ್ರ ಹಾಗೂ ಭೂಮಿ. ತಮ್ಮ ಆಸ್ತಿಗಳನ್ನು ಡಿಜಿಟಲೀಕರಣಕ್ಕೆ ಒಳಪಡಿಸುವ ಮೂಲಕವಾಗಿ ತಮ್ಮ ಪೂರ್ವಿಕರು ಮಾಡಿದ ಆಸ್ತಿಗಳು ಅವುಗಳಲ್ಲಿ ಪಿತ್ರಾರ್ಜಿತ ಹಾಗೂ ಸ್ವಯಾರ್ಜಿತ ಆಸ್ತಿಗಳನ್ನು ಉಳಿಸಿಕೊಳ್ಳಬಹುದಾಗಿದೆ.

The work is licensed under a Creative Commons Attribution Non Commercial 4.0 International License

9) ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಚಿಂತನಧಾರೆಗಳು :- ತೇಜಸ್ವಿ ಅವರು ಸಮಾಜವಾದಿ ಹಿನ್ನೆಲೆಯುಳ್ಳವರು. ರೈತನಾಯಕರಾದ ಪ್ರೊ. ನಂಜುಂಡಸ್ವಾಮಿ ಅವರ ಬಹುತೇಕ ಚಿಂತನೆಗಳ ಬಗ್ಗೆ ಸಹಮತಿಯನ್ನು ಹೊಂದಿರುವವರು. ಲೋಹಿಯಾ ಅವರ ತತ್ವಚಿಂತನೆಗಳ ಬಗ್ಗೆ ಆಳವಾದ ಕಾಳಜಿಯನ್ನು ಹೊಂದಿ ನಗರ ಕೇಂದ್ರಿಕೃತವಾದ ಬದುಕನ್ನು ಬಿಟ್ಟು, ಗ್ರಾಮೀಣತೆಯ ನೆಲೆಯಲ್ಲಿ ತಮ್ಮ ಬದುಕನ್ನು ಹಸನು ಮಾಡಿಕೊಂಡು ಬೇರೆ ಯಾರಿಗೂ ಉಪದೇಶವನ್ನು ನೀಡುವ ಗೋಜಿಗೆ ಹೋಗದೆ ತಮ್ಮ ಪಾಡಿಗೆ ತಾವು ಸಹಜವಾದ ಕೃಷಿಯನ್ನು ಮಾಡಿಕೊಂಡು ಸುಸ್ಥಿರ ಗ್ರಾಮೀಣಾಭಿವೃದ್ಧಿಗೆ ಶ್ರಮಿಸಿದವರು.

ನಗರ ಕೇಂದ್ರಿತ ಅಧಿಕಾರ, ಅಂತಸ್ತುಗಳ ಹಾಗೂ ಮೋಜಿನ ಜೀವನವನ್ನು ಬಿಟ್ಟು ಮೂಡಿಗೆರೆಯಲ್ಲಿ ತಮ್ಮ ಪಾಡಿಗೆ ತಾವು ಕೃಷಿ ಕೇಂದ್ರಿತ ಚಟುವಟಿಕೆಗಳನ್ನು, ಸಿದ್ಧಮಾದರಿಯ ಸಂಪ್ರದಾಯಬದ್ಧ ಕೃಷಿಯ ಚಟುವಟಿಕೆಗಳನ್ನು ಮಾಡದೆ, ಅಧುನಿಕವಾಗಿ ತಂತ್ರಜ್ಞಾನ ಬಳಸಿ, ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚಿನ ಪರಿಣಿತಿಯನ್ನು ಪಡೆದಿರುವ ವ್ಯಕ್ತಿ. ಸಮೂಹಗಳ ಒಡನಾಟಗಳಿಂದ ಅವರು ಆಧುನಿಕ ಕೃಷಿ ಪದ್ಧತಿಯನ್ನು ಅನುಸರಿಸಿ ಗ್ರಾಮೀಣ ಪರಿಸರದಲ್ಲಿ ಮಾದರಿ ವ್ಯಕ್ತಿಯಾಗಿ ಬಾಳಿ ತಮ್ಮ ಬದುಕನ್ನು ತಮ್ಮ ಸುತ್ತಮುತ್ತಲಿನವರ ಬದುಕನ್ನು ಹಸನು ಮಾಡಿಕೊಂಡವರು.

ಸಮಾಜವಾದಿ ಚಳುವಳಿ ಮತ್ತು ರೈತಚಳುವಳಿಯಲ್ಲಿ ಭಾಗಿಯಾಗಿರುವುದರಿಂದ ಗ್ರಾಮಿಣ ಭಾರತದ ಹಲವಾರು ಸಮಸ್ಯೆಗಳ ಬಗ್ಗೆ ತಮ್ಮ ಸಾಹಿತ್ಯದಲ್ಲಿ, ಅನುವಾದ ಸಾಹಿತ್ಯದಲ್ಲಿ ವಿಶ್ವದಲ್ಲಿ ನಡೆಯುತ್ತಿರುವ ಜಾಗತಿಕ ತಾಪಮಾನಗಳ ಬಗ್ಗೆ, ಬಹುರಾಷ್ಟ್ರೀಯ ಕಂಪನಿಗಳ ಬಗ್ಗೆ, ರಾಜ್ಯ ಮತ್ತು ಕೇಂದ್ರ ಸರ್ಕಾರ ಜಾರಿ ತಂದಿರುವ ಗ್ರಾಮಿಣ ಭಾರತದ ಪರ ಹಾಗೂ ವಿರೋಧಿ ನಿಲುವುಗಳ ಬಗ್ಗೆ ಜನಸಾಮಾನ್ಯರಿಗೆ ತಿಳುವಳಿಕೆಯನ್ನು ನೀಡುವ ಪ್ರಯತ್ನವನ್ನು ದಿನನಿತ್ಯ ಪ್ರತ್ಯಕ್ಷವಾಗಿಯೂ ಅಥವಾ ಅವರ ಸಾಹಿತ್ಯದ ಮೂಲಕ ಇಂದಿಗೂ ಪರೋಕ್ಷವಾಗಿ ಮಾಡುತ್ತಿದ್ದಾರೆ. ಉದಾಹರಣೆಗೆ :- ರೈತರ ಕುರಿತಾದ ಭಾಷಣವಾಗಲಿ, ರೈತ ಚಳುವಳಿಯ ಜಾಥದಲ್ಲಿ ಪಾಲ್ಗೊಳ್ಳುವಿಕೆ ತಮ್ಮ ಕಥೆ, ಕಾದಂಬರಿ ಹಾಗೂ ವೈಚಾರಿಕ ಬರಹಗಳ ಮೂಲಕ ಓದು ಬರಹ ಕಲಿತವರನ್ನು ಅದರಲ್ಲೂ ಮೊದಲನೇ ತಲೆಮಾರು ಅಕ್ಷರವಂತವರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದರು.

ಕನ್ನಡದ ಶ್ರೇಷ್ಠ ಕಥೆಗಾರರು, ಕಿರಿಯ ಸಾಲುಗಳಲ್ಲಿ ಅರಿವಿನ ಜ್ವಾಲೆಯನ್ನು ಹೊತ್ತಿಸುವ ದೇವನೂರು ಮಹಾದೇವ ಅವರ ಡಾಂಬರು ಬಂದದ್ದು ಎನ್ನುವ ಕಥೆಯ ಮೂಲಕವಾಗಿ, ಒಂದು ಮುಗ್ಧ ಹಳ್ಳಿಗೆ ಆಧುನಿಕತೆ ಪ್ರವೇಶ ಮಾಡಿದಾಗ ಡಾಂಬರು ಹೇಗೆ ಆ ಹಳ್ಳಿಯನ್ನು ಧನಾತ್ಮಕವಾಗಿ ಚಲನೆಯಲ್ಲಿ ಇಟ್ಟಿತ್ತು ಎಂಬ ಅಂಶ ಈ ಕಥೆಯಲ್ಲಿ ಅಡಗಿದೆ. ಆ ಹಳ್ಳಿಗೆ ಡಾಂಬರು ಬಂದದ್ದು ಒಂದು ಹೊಸ ಉತ್ಸಾಹವನ್ನು ಆ ಹಳ್ಳಿಗೆ ತಂದಿತ್ತು ಎನ್ನುವ ಅಂಶ ಕಥೆಯ ಆಳದಲ್ಲಿದೆ.

ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಆಧುನಿಕತೆಯ ಪ್ರವೇಶವನ್ನು ಬೈಸಿಕಲ್ಲು ಹೇಗೆ ಹಳ್ಳಿಗಳು ನಗರವನ್ನಾಗಿ ಪರಿವರ್ತಿಸುತ್ತದೆ ಎನ್ನುವ ಅಂಶವನ್ನು ಈ ಕಾದಂಬರಿಯಲ್ಲಿ ಗುರುತಿಸಬಹುದು.
ಕಾರಂತರ ಚೋಮನದುಡಿ ಕಾದಂಬರಿಯಲ್ಲಿ ಬರುವ ಬಸ್ಸಿನ ಪ್ರಸಂಗವು ಕೃಷಿ ಕಾರ್ಮಿಕರನ್ನು ಆಧುನಿಕತೆಯ ಮೂಲಕ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಕರೆದುಕೊಂಡು ಹೋಗುವ, ಈ ಮೂಲಕ ಗ್ರಾಮೀಣ ಪರಿಸರದಲ್ಲಿ ಆರ್ಥಿಕ ಸುಸ್ಥಿರವನ್ನು ಸ್ಥಾಪಿಸುವುದನ್ನು ಗುರುತಿಸಬಹುದು.

ಶ್ರೀ ಕೃಷ್ಣ ಆಲನಹಳ್ಳಿ ಅವರ ಪರಸಂಗದ ಗೆಂಡೆತಿಮ್ಮ, ಭುಜಂಗಯ್ಯನ ದಶಾವತಾರಗಳು ಇವೆರಡೂ ಕಾದಂಬರಿಗಳಲ್ಲಿ ನಗರ ಕೇಂದ್ರಿತ ವಸ್ತುಗಳು ಹಳ್ಳಿಗೆ ಬಂದಾಗ ಪಟ್ಟಣದಲ್ಲಿ ಆಕರ್ಷಣೆಯನ್ನು ಉಂಟು ಮಾಡಿ ಹಳ್ಳಿಗಳು ಆರ್ಥಿಕವಾಗಿ ಸದೃಢಗೊಳ್ಳುವುದನ್ನು ಗಮನಿಸಬಹುದು. ಉದಾಹರಣೆಗೆ ಭುಜಂಗಯ್ಯನ ದಶಾವತಾರದಲ್ಲಿ ಬರುವ ಹೋಟೆಲ್ ಮತ್ತು ಪರಸಂಗದ ಗೆಂಡೆತಿಮ್ಮ ಕಾದಂಬರಿಯಲ್ಲಿ ಬರುವ ತಿಮ್ಮ ತರುವ ನಗರದ ವಸ್ತುಗಳು

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಕಥನ ಸಾಹಿತ್ಯದಲ್ಲಿ ಬರುವ ಅಬಚೂರಿನ ಪೋಸ್ಟ್ ಆಫೀಸ್ ನೀಳ್ಗತೆಯಲ್ಲಿ ಪೋಸ್ಟ್ ಆಫೀಸ್ ಹೇಗೆ ಹಳ್ಳಿಗಳು ಸುಸ್ಥಿರವಾದ ಅಭಿವೃದ್ಧಿಯನ್ನು ಹೊಂದುತ್ತಿದೆ ಎನ್ನುವುದನ್ನು ಈ ನೀಳ್ಗತೆ ತಿಳಿಸುತ್ತದೆ. ಕೇಂದ್ರ ಸರ್ಕಾರದ ಅಡಿಯಲ್ಲಿ ಬರುವ ಪೋಸ್ಟ್ ಆಫೀಸ್ ಅಬಚೂರಿನ ಕುಗ್ರಾಮವನ್ನು ಹೇಗೆ ಚೈತನ್ಯಶೀಲವನ್ನಾಗಿ ಮಾಡುತ್ತದೆ ಎಂದು ಗುರುತುಸಿಬಹುದು. ನಗರ ಮತ್ತು ಹಳ್ಳಿಗಳಿಗೆ ಸಂದೇಶವಾಹಕವಾಗಿ ಜನಸಾಮಾನ್ಯರ ನೋವು ನಲಿವುಗಳಿಗೆ ಸ್ಪಂಧಿಸುವುದನ್ನು ಗಮನಿಸಬಹುದು.

ತೇಜಸ್ವಿ ಅವರ ತಬರನ ಕಥೆ ನಿವೃತ್ತಿ ನೌಕರರ ಪಿಂಚಣಿ ವ್ಯವಸ್ಥೆಯ ದಾರುಣತೆಯನ್ನು ಪ್ರತಿನಿಧಿಸುವ ಕಾಲದ ಪರೀಕ್ಷೆಯಲ್ಲಿ ಗೆದ್ದ ಕಲಾಕೃತಿಯಾಗಿದೆ. ತಬರ ಇಂಗ್ಲೀಷ್ ಪ್ರಭುತ್ವದ ಪರವಾಗಿ ಮಾತನಾಡುತ್ತಾ, ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ನಮ್ಮ ದೇಶ ಲಂಚಗುಳಿತನ, ಸ್ವಜನಪಕ್ಷಪಾತಕ್ಕೆ ಬಲಿಯಾಯಿತು ಎಂದು ಹೇಳುತ್ತಾ, ವ್ಯವಸ್ಥೆ ತಬರನನ್ನು ಹೇಗೆ ಹಂತಹಂತವಾಗಿ ಶೋಷಣೆಗೆ ಒಳಪಡಿಸಿತು ಎನ್ನುವುದನ್ನು ಈ ಕಥೆಯ ಮೂಲಕ ತಿಳಿದುಕೊಳ್ಳಬಹುದು. ಆಧುನಿಕ ಭಾರತ ಗ್ರಾಮೀಣದಲ್ಲಿ ಸುಸ್ಥಿರವಾದ ಗ್ರಾಮೀಣಾಭಿವೃದ್ಧಿಯ ಫಲವಾಗಿ ಪಿಂಚಣಿ ವ್ಯವಸ್ಥೆ, ಡಿಜಿಟಲ್ ಮಾರ್ಗದಲ್ಲಿ ಸಂಬಂಧಪಟ್ಟವರ ಖಾತೆಗಳಿಗೆ ನೇರವಾಗಿ ಸೇರುತ್ತಿರುವುದನ್ನು ಈ ಕಾಲದಲ್ಲಿ ಗಮನಿಸಬಹುದು.

The work is licensed under a Creative Commons Attribution Non Commercial 4.0 International License

ತೇಜಸ್ವಿ ಅವರ ಚಿದಂಬರ ರಹಸ್ಯ ಕಾದಂಬರಿಯಲ್ಲಿ ಕೃಷಿ ಚಟುವಟಿಕೆ, ಮಾರುಕಟ್ಟೆಗಳಿಗೆ ಸಂಬಂಧಿಸಿದಂತೆ, ಏಲಕ್ಕಿ ಬೆಳೆ ಬೆಳೆಯುವುದು. ಜಾಗತಿಕ ವಿದ್ಯಮಾನದೊಂದಿಗೆ ಜಾಗತಿಕ ಆರ್ಥಿಕ ವಿಶ್ವ ವಿದ್ಯಮಾನಗಳು ಹೇಗೆ ಒಂದಕ್ಕೊಂದು ಬೆಸದುಕೊಂಡಿದೆ ಎನ್ನುವ ವಿಚಾರವನ್ನು ಸೂಕ್ಷ್ಮವಾಗಿ ಹೇಳುತ್ತಾರೆ. ವಾಣಿಜ್ಯ ಬೆಳೆಗಳನ್ನು ಬೆಳೆಯುವುದರಿಂದ ಹಳ್ಳಿಗಳು ಹೇಗೆ ಆರ್ಥಿಕ ಅಭಿವೃದ್ಧಿಯನ್ನು ಹೊಂದಬಹುದು ಎಂದು ಹೇಳುತ್ತಲೇ, ವಿಪರೀತವಾದ ಪ್ರಕೃತಿಯ ಮೇಲಿನ ಮನುಷ್ಯನ ದಬ್ಬಾಳಿಕೆಯಿಂದ ಮಾನವ ಕುಲವು ಸರ್ವನಾಶವಾಗುತ್ತದೆ ಎನ್ನುವ ಪರೋಕ್ಷ ಎಚ್ಚರವನ್ನು ನೀಡುತ್ತಾರೆ. ಪ್ರಕೃತಿ ತನ್ನ ಸಮತೋಲವನ್ನು ಪ್ರವಾಹ, ಭೂಕಂಪಗಳಿಂದ ತನ್ನ ಭಾರವನ್ನು ಸಮಸ್ಥಿತಿಗೆ ತರುವ ಶಕ್ತಿ ಪ್ರಕೃತಿಗಿದೆ ಎನ್ನುವ ಮಾತುಗಳು ಚಿದಂಬರ ರಹಸ್ಯ ಕಾದಂಬರಿಯ ಗರ್ಭದಲ್ಲಿ ಅಡಗಿದೆ.

ಉಪಸಂಹಾರ :-

ಸುಸ್ಥಿರ ಗ್ರಾಮೀಣ ಸಬಲೀಕರಣಕ್ಕಾಗಿ ಡಿಜಿಟಲ್ ಮಾರ್ಗಗಳು ಕನ್ನಡ ಸಾಹಿತ್ಯದ ಹಿನ್ನೆಲೆಯಿಂದ ಗಮನಿಸಿದಾಗ ಡಿಜಿಟಲ್ ಮಾರ್ಗದ ಇತಿಮಿತಿಗಳನ್ನು ಸಾಹಿತ್ಯವು ಶಕ್ತವಾಗಿ ತನ್ನ ಕಥನ ಪರಂಪರೆಯಲ್ಲಿ ಸಮರ್ಥವಾಗಿ ಹಿಡಿದಿಡುವ ಪ್ರಯತ್ನ ಹಿಂದಿನಿಂದ – ಇಂದಿನವರೆಗೂ ಮಾಡಿಕೊಂಡು ಬಂದಿರುವುದನ್ನು ಗಮನಿಸಬಹುದು. ಇತ್ತೀಚಿನ ಆಧುನಿಕ ಭಾರತಕ್ಕೆ ಧನಾತ್ಮಕವಾದ ಡಿಜಿಟಲ್ ರೂಪದ ಮಾರ್ಗಗಳು ಅಗತ್ಯವಾಗಿದೆ.

## 1. AUTHOR(S) CONTRIBUTION

The writers affirm that they have no connections to, or engagement with, any group or body That provides financial or non-financial assistance for the topics or resources covered in this Manuscript.

## 6. CONFLICTS OF INTEREST

The authors declared no potential conflicts of interest with respect to the research, authorship, And/or publication of this article.

## 7. PLAGIARISM POLICY

All authors declare that any kind of violation of plagiarism, copyright and ethical matters will\ Take care by all authors. Journal and editors are not liable for aforesaid matters.

## 8. SOURCES OF FUNDING

The authors received no financial aid to support for the research.

## REFERENCES

ಆಕರ ಪಠ್ಯಗಳು
ಕೆ.ಪಿ.ಪೂರ್ಣಚಂದ್ರ ತೇಜಸ್ವಿ - ಚಿದಂಬರ ರಹಸ್ಯ
ತಬರನ ಕಥೆ
ಅಬಚೂರಿನ ಪೋಸ್ಟ್ ಆಫೀಸ್
ಡಾ.ಕೆ. ಶಿವರಾಮ ಕಾರಂತ - ಚೋಮನದುಡಿ
ಕುವೆಂಪು - ಮಲೆಗಳಲ್ಲಿ ಮದುಮಗಳು
ದೇವನೂರು ಮಹಾದೇವ - ಡಾಂಬರು ಬಂದದ್ದು
ಕೆ.ಪಿ. ಪೂರ್ಣಚಂದ್ರ ತೇಜಸ್ವಿ - ಸಂಪಾದಕ
ಸಮಗ್ರ ಕೃತಿ ಜಗತ್ತು ಪ್ರೊ.ಕೆ.ಆರ್. ಶಿವಾರೆಡ್ಡಿ
ಸಂಪುಟ 8

The work is licensed under a Creative Commons Attribution Non Commercial 4.0 International License